1. ಕಾವೇರಿ ವಿಚಾರದ ಬಗ್ಗೆ ಹೇಳಿಕೆ ನೀಡಲು ಮನವಿ

ಅಧ್ಯಕ್ಷರು: ಎಲ್ಲರೂ ಒಂದೇ ಸಲ ಮಾತನಾಡಿದರೆ ಹೇಗೆ? ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳೋಣ.

(ಗೊಂದಲ)

statement ಮಾಡುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ಎಚ್.ಸಿ.ಬಾಲಕೃಷ್ಣ: ಇದು ಬಹಳ ಮುಖ್ಯವಾದ ವಿಚಾರ. ಕಾವೇರಿ ನೀರಿನ ವಿಚಾರದ ಬಗ್ಗೆ ಒಂದು statement ಮಾಡುವುದಕ್ಕೆ ಹೇಳುತ್ತೀರಾ?

ಅಧ್ಯಕ್ಷರು: ಪ್ರಶ್ನೋತ್ತರವಾದ ಮೇಲೆ statement ಮಾಡುವುದಕ್ಕೆ ಹೇಳೋಣ.

(ಗೊಂದಲ)

(ಹೆಬ್ರಿ ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂದು ಹೇಳಿ ಮಾನ್ಯ ಗೋಪಾಲ ಭಂಡಾರಿಯವರು ಸದನದ ಬಾವಿಗೆ ಧರಣಿಗೆ ಬಂದರು)

ಶ್ರೀ ಅಭಯ ಚಂದ್ರ ಜೈನ್: ಮುಲ್ಕಿಯನ್ನು ತನ್ನ ತಾಲ್ಲೂಕು ಮಾಡಬೇಕು.

(ಗೊಂದಲ)

ಶ್ರೀ ಎಚ್.ಸಿ. ಬಾಲಕೃಷ್ಣ: ಮಾನ್ಯಮುಖ್ಯ ಮಂತ್ರಿಗಳೀಂದ ಒಂದು statement ಮಾಡಿಸಿ.

ಅಧ್ಯಕ್ಷರು: ಪ್ರಶ್ನೋತ್ತರವಾಗಲಿ ಆಮೇಲೆ ಮಾಡಿಸೋಣ. ನಿಮಗೆ ಆಮೇಲೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಅಧ್ಯಕ್ಷರು: ಪ್ಲೀಸ್, ಮಾನ್ಯ ಗೋಪಾಲ ಭಂಡಾರಿಯವರು ತಮ್ಮ ಸ್ಥಾನಕ್ಕೆ ಹೋಗಬೇಕು.

(ಈ ಹಂತದಲ್ಲಿ ಗೋಪಾಲ ಭಂಡಾರಿಯವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋದರು)

(ಗೊಂದಲ)

ಅಧ್ಯಕ್ಷರು: ಪ್ರಶ್ನೋತ್ತರವಾದ ಮೇಲೆ ಎಲ್ಲದಕ್ಕೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: (ಜಲ ಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ, ನಾವು ಸದನಕ್ಕೆ ತಿಳಿಸಬೇಕಾಗಿದೆ. ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳಬೇಕೇಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಮಾತನಾಡುವುದನ್ನು ಮೊದಲು ಕೇಳಿ ಬಾಲಕೃಷ್ಣರವರೆ, ಪ್ರಶ್ನೋತ್ತರವಾದ ಮೇಲೆ ಪ್ರಸ್ತಾಪ ಮಾಡಿ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಗುರುವಾರ ದಿವಸ ಸದನ ಮುಗಿದ ಮೇಲೆ ಕಾವೇರಿ ವಿಷಯದಲ್ಲಿ ಏನೇನು ಬೆಳವಣಿಗೆ ಆಗಿದೆ ಎನ್ನುವುದನ್ನು ನಾವು ಕೂಡ ಸದನಕ್ಕೆ ತಿಳಿಸಬೇಕಾಗಿದೆ. ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಇದೆ. ಪ್ರಶ್ನೋತ್ತರ ವೇಳೆ ಆದ ತಕ್ಷಣ ಕಾವೇರಿ ವಿಚಾರವನ್ನು ತೆಗೆದುಕೊಳ್ಳಿ ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಸ್ಪಷ್ಟವಾಗಿ ಹೇಳಿರುತ್ತಾರೆ, ಆಮೇಲೆ statement ಮಾಡುತ್ತಾರೆ.

ಶ್ರೀ ಎಚ್.ಸಿ. ಬಾಲಕೃಷ್ಣ: ಆ ಭಾಗದ ರ ಆ ಭಾಗದ ರೈತರ ಪರಿಸ್ಥಿತಿ ಬಗ್ಗೆ ದಯವಿಟ್ಟು ಹೇಳಬೇಕು. ಒಂದು ಕಡೆ ನೀವು ನೀರು ಬಿಡುವುದಿಲ್ಲ– ವೆಂದು ಹೇಳುತ್ತೀರಿ ಇನ್ನೊಂದು ಕಡೆ ನೀರು ಬಿಡುತ್ತೀರಿ. ಜನ ಬದುಕುವುದು ಬೇಡವೆ? ಬೆಂಗಳೂರಿಗೆ ಅದನ್ನು ಕೊಡುತ್ತೇವೆ ಇದನ್ನು ಕೊಡುತ್ತೇವೆಂದು ಏನೇನೊ ಸೌಲಭ್ಯ ಕೊಡುತ್ತೇನೆಂದು ದೊಡ್ಡದಾಗಿ ಬಜೆಟ್ನಲ್ಲಿ ಘೋಷಣೆ ಮಾಡಿರುತ್ತೀರಿ, ಅವರಿಗೆ ನೀರು ಕೊಡುವುದು ಬೇಡವೆ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ಮಾತನಾಡುವುದಕ್ಕೆ allow ಮಾಡಿದ್ದೀರಾ?

ಅಧ್ಯಕ್ಷರು: ಸಚಿವರು ಸ್ಪಷ್ಟವಾಗಿ ಹೇಳಿರುತ್ತಾರೆ ಅದರ ಬಗ್ಗೆ ಆಮೇಲೆ statement ಮಾಡುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಗುರುವಾರ ದಿವಸ ಸದನ ಮುಗಿದ ಮೇಲೆ ಕಾವೇರಿ ವಿಷಯದಲ್ಲಿ ಏನೇನು ಬೆಳವಣಿಗೆ ಆಗಿದೆ ಎನ್ನುವುದನ್ನು ನಾವು ಕೂಡ ಸದನಕ್ಕೆ ತಿಳಿಸಬೇಕಾಗಿದೆ. ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಇದೆ. ಪ್ರಶ್ನೋತ್ತರ ವೇಳೆ ಆದ ತಕ್ಷಣ ಕಾವೇರಿ ವಿಚಾರವನ್ನು ತೆಗೆದುಕೊಳ್ಳಿ. ನಾನು ಗುರುವಾರದ ನಂತರ ಏನೇನು ಆಗಿದೆ ಎನ್ನುವು ಹೇಳುತ್ತೇನೆ. ಅದರ ಮೇಲೆ ಅವರು ಏನಾದರೂ ಮತ್ತೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ತಾವು ಪ್ರಶ್ನೋತ್ತರದ ನಂತರ ಇದನ್ನು ತೆಗೆದುಕೊಳ್ಳಬೇಕು.

ಶ್ರೀ ಎಚ್.ಸಿ. ಬಾಲಕೃಷ್ಣ: ಇದು ಬಹಳ ಮುಖ್ಯವಾದ ವಿಚಾರ ಆಮೇಲೆ ಬೇಕಾದರೆ ಪ್ರಶ್ನೋತ್ತರ ತೆಗೆದುಕೊಳ್ಳಿ. ಈಗ ದಯಮಾಡಿ ಅದರ ಬಗ್ಗೆ ಹೇಳಬೇಕು.

ಅಧ್ಯಕ್ಷರು: ಹಾಗೆ ನೀವು ಒತ್ತಾಯ ಮಾಡಿದರು ಹೇಗೆ?

ಶ್ರೀ ಎಚ್.ಸಿ. ಬಾಲಕೃಷ್ಣ: ಕಾವೇರಿ ವಿಚಾರ ಬಹಳ ಮುಖ್ಯವಾದುದು.

ಶ್ರೀ ಬಸವರಾಜ ಬೊಮ್ಮಾಯಿ: ಹಲವಾರು ವಿಚಾರಗಳಲ್ಲಿ ತಮ್ಮದೇ ಆದ ಪ್ರಶ್ನೆಗಳು ಇವೆ. ತಮ್ಮ ಕ್ಷೇತ್ರಕ್ಕೆ ಸಂಬಂದಪಟ್ಟ ಮಹತ್ವದ ಪ್ರಶ್ನೆಗಳು ಇವೆ. ಅದಕ್ಕಗಿ ನಂತರ ತೆಗೆದುಕೊಳ್ಳೋಣ.

ಶ್ರೀ ಎಚ್.ಸಿ. ಬಾಲಕೃಷ್ಣ: ಬೇಸಿಗೆ ಕಾಲ. ಭೀಕರವಾದ ಕುಡಿಯುವ ನೀರಿನ ಸಮಸ್ಯೆ ಇದೆ. ಪ್ರಶ್ನೋತ್ತರ ಆಮೇಲೆ ಮಾಡಿ. ದಯಮಾಡಿ ಮೋದಲು ಇದರ ಬಗ್ಗೆ ನೀವು statement ಮಾಡಿ.

ಶ್ರೀ ಎಚ್. ಎಸ್. ಶಕರಲಿಂಗೇಗೌಡ: ಕಾವೇರಿ ನೀರಿನ ಸಲುವಾಗಿ ಜನರು ಕಂಗಾಲಾಗಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: statement ಮಾಡದಿರುವುದು ಮಹಾಪರಾಧ.

ಅಧ್ಯಕ್ಷರು: ಪ್ರಶ್ನೋತ್ತರವಾದ ಮೇಲೆ ಕಾವೇರಿ ವಿಷಯ ಮತ್ತು ತಾಲ್ಲೂಕುಗಳ ವಿಷಯ ತೆಗೆದುಕೊಳ್ಳೋಣ. ಪ್ಲೀಸ್, ಸಹಕಾರ ಮಾಡಿ ಈಗ ಪ್ರಶ್ನೋತ್ತರ.